## 2. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ವಿನಾಯಕ ನಗರ, ರಿಪ್ಪನ್‌ಪೇಟೆ

### ಶಾಲೆಯ ಹಿನ್ನೆಲೆ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ರಿಪ್ಪನ್‌ಪೇಟೆ ವ್ಯಾಪ್ತಿಯಲ್ಲಿ ಬರುವ ವಿನಾಯಕ ನಗರದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ದಿನಾಂಕ 10–07–2004 ರಂದು ಪ್ರಾರಂಭವಾಗಿದ್ದು, ಈ ಶಾಲೆಯಲ್ಲಿ ಬಹುತೇಕ ಮಕ್ಕಳು ಪರಿಶಿಷ್ಟ ಜಾತಿಯ, ವಲಸೆ ಜನಾಂಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇವರು ಆರ್ಥಿಕವಾಗಿಯೂ ಹಾಗೂ ಶೈಕ್ಷಣಿಕವಾಗಿಯೂ ದುರ್ಬಲರಾಗಿದ್ದಾರೆ. ಆದಾಗ್ಯೂ ಶಾಲೆಯ ಪರಿಸರವು ನೈಸರ್ಗಿಕವಾಗಿಯೂ ಹಚ್ಚ ಹಸಿರಾಗಿದ್ದು ಭೇಟಿ ನೀಡಿದವರೆಲ್ಲರು ಉತ್ತಮ ಪರಿಸರದ ಉತ್ತಮ ಶಾಲೆ ಎಂದು ಪ್ರಶಂಸಿಸುತ್ತಾರೆ.

ನಮ್ಮ ಶಾಲೆಯಲ್ಲಿ ಈಗ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದೇವೆ. ಮುಖ್ಯ ಶಿಕ್ಷಕರಾಗಿ ಶ್ರೀಯುತ ತಿಮ್ಮಪ್ಪ ಸಿ. ಮತ್ತು ಸಹ ಶಿಕ್ಷಕಿಯಾಗಿ ಶ್ರೀಮತಿ ಸವಿತಾ ಜಿ.ಎಂ ಇವರು ಕಾರ್ಯ ನಿರ್ವಹಿಸುತ್ತಿದ್ದೇವೆ.

### ಶಾಲೆಯಲ್ಲಿನ ಸಾಧನೆಗಳು:–

- ❖ ಶಾಲಾ ಮಕ್ಕಳ ದಾಖಲಾತಿ ಹೆಚ್ಚಳ,
- ❖ ಮಕ್ಕಳ ಪೋಷಕರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ
- ❖ ಶಾಲಾ ವ್ಯವಸ್ಥೆಯಲ್ಲಿನ ಬದಲಾವಣೆ
- ❖ ಶಾಲಾ ಶೈಕ್ಷಣಿಕ, ಭೌತಿಕ ಸುಧಾರಣೆಗೆ ದಾನಿಗಳಿಂದ ಸಹಾಯ
- ❖ ಶಾಲಾ ಭೌತಿಕ ಪರಿಸರದ ಸೌಂದರ್ಯ
- ❖ ಶಾಲಾ ಶೈಕ್ಷಣಿಕ ಪ್ರಗತಿ

ಶಾಲಾ ಶೈಕ್ಷಣಿಕ ಸಾಧನೆಯಲ್ಲಿ ಬಂದ ಸಮಸ್ಯೆಗಳು ಹಾಗು ಅವುಗಳನ್ನು ಪರಿಹರಿಸಿಕೊಂಡ ರೀತಿ

### ❖ ಶಾಲಾ ಮಕ್ಕಳ ದಾಖಾಲಾತಿ ಹೆಚ್ಚಳ

ದಿನಾಂಕ 10–07–2004 ರಂದು ನಮ್ಮ ಶಾಲೆಯು ಎಮ್.ಎಲ್.ಎ ಶ್ರೀಯುತ ಹಾಲಪ್ಪ ಇವರಿಂದ ಪ್ರಾರಂಭೋತ್ಸವ ನಡೆಸಿದ ನಮ್ಮ ಶಾಲೆಯಲ್ಲಿನ ಆ ವರ್ಷದ ದಾಖಲಾತಿ 1 ರಿಂದ 4 ನೇ ತರಗತಿಗೆ ಒಟ್ಟು 20 ವಿದ್ಯಾರ್ಥಿಗಳು ದಾಖಲಾಗಿದ್ದರು, ಶಾಲೆಯ ಶಿಕ್ಷಕರಾಗಿ

ಒಬ್ಬರು ಕಾರ್ಯನಿರ್ವಹಿಸುತ್ತಿದ್ದರು, ತದನಂತರ 2009–10 ರಲ್ಲಿ ನಮ್ಮ ಶಾಲೆಯ ದಾಖಲಾತಿ 31 ಇದ್ದು ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದರು, ಕೆಲವೇ ವರ್ಷಗಳಲ್ಲಿ 1/2 ಕಿ.ಮೀ ವ್ಯಾಪ್ತಿಯೊಳಗೆ ಒಂದು ಖಾಸಗಿ ಶಾಲೆಯು ಅನುದಾನಿತ ಶಾಲೆಯಾದ ಪರಿಣಾಮವಾಗಿ ನಮ್ಮ ಶಾಲೆಯ ದಾಖಲಾತಿಯು ಕಡಿಮೆಯಾಯಿತು, ಅದು ಎಷ್ಟರ ಮಟ್ಟಿಗೆ ಎಂದರೆ ಶಾಲೆ ಮುಚ್ಚುವ ಹಂತಕ್ಕೆ ಹೋಯಿತು, ಏಳು ಬೀಳುವಿನೊಂದಿಗೆ ಶಾಲಾ ಮಕ್ಕಳ ದಾಖಲಾತಿ 7 ಕ್ಕೆ ಇಳಿಯಿತು, ಆಗ ಒಬ್ಬ ಶಿಕ್ಷಕರು ಅಂದರೆ ಶ್ರೀಯುತ ತಿಮ್ಮಪ್ಪ ಸಿ ಇವರು ಕಾರ್ಯ ನಿರ್ವಹಿಸುತ್ತಿದ್ದರು.

ಇವರು ಶಾಲೆಯ ಉಳಿವಿಗಾಗಿ ಮಕ್ಕಳ ದಾಖಲಾತಿ ಹೆಚ್ಚಿಸುವ ನಿಟ್ಟಿನಲ್ಲಿ ಅನೇಕ ರೀತಿಯ ತೊಂದರೆಗಳನ್ನು ಎದುರಿಸಿದರು. ಸ್ಥಳೀಯ ಮಕ್ಕಳ ದಾಖಲಾತಿ ಕಡಿಮೆಯಾದಾಗ ಶಾಲೆಯಿಂದ ಸುಮಾರು 4 ಕಿ.ಮೀ ದೂರದಲ್ಲಿರುವ ಬರುವೆ ಗ್ರಾಮದಲ್ಲಿ ಶೆಡ್‌ಗಳಲ್ಲಿ ವಾಸವಾಗಿದ್ದ ಮಕ್ಕಳನ್ನು ಸ್ವತ: ತಾವೇ ತಮ್ಮ ದ್ವಿಚಕ್ರ ವಾಹನದಲ್ಲಿ ಮಕ್ಕಳನ್ನು ಕರೆದುಕೊಂಡು ಬಂದು ಬೋಧಿಸಿ ಮತ್ತೆ ಅವರೆ ತಮ್ಮ ದ್ವಿಚಕ್ರ ವಾಹನದಲ್ಲಿ ಬಿಟ್ಟು ಬರುತ್ತಿದ್ದರು, ಅಲ್ಲದೆ ಮಕ್ಕಳಿಗೆ ಬೇಕಾಗುವ ಅಗತ್ಯ ಸೌಲಭ್ಯಗಳನ್ನು ಅವರೇ ಮಾಡಿಕೊಡುತ್ತಿದ್ದಾರೆ ಹೀಗೆ ಸತತ 2 ರಿಂದ 3 ವರ್ಷಗಳ ಪ್ರಯತ್ನದ ಫಲವಾಗಿ ನಮ್ಮ ಶಾಲೆಯ ದಾಖಲಾತಿ 12 ಕ್ಕೆ ಏರಿತು, 2014 ರಲ್ಲಿ 12 ಮಕ್ಕಳ ದಾಖಲಾತಿ ಇದ್ದುದರಿಂದ ಇನ್ನೊಂದು ಖಾಲಿ ಹುದ್ದೆ ಮಂಜೂರು ಆಯಿತು, 2015 ಕ್ಕೆ ಶ್ರೀಮತಿ ಸವಿತಾ ಜಿ ಎಮ್ ಆ ಖಾಲಿ ಹುದ್ದೆಗೆ ನೇಮಕವಾದರು, ಇಬ್ಬರು ಶಿಕ್ಷಕರು ಆ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಪಣ ತೊಟ್ಟರು. ಅದೇ ಸಂದರ್ಭದಲ್ಲಿ ಶಿಕ್ಷಕರು ತಮ್ಮ ದ್ವಿ ಚಕ್ರ ವಾಹನದಲ್ಲಿ ಹೆಚ್ಚು ಮಕ್ಕಳನ್ನು ಒಟ್ಟಿಗೆ ಕರೆತರುತ್ತಾರೆ ಎಂದು ಸಮಾಜ ಕಾರ್ಯಕರ್ತರೊಬ್ಬರು ಮುಷ್ಕರ ಹೂಡಿ ಪೋಲಿಸ್ ಠಾಣೆಗೆ ದೂರು ಸಹ ನೀಡಿದರು. ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ನಾವಿಬ್ಬರು ಶಿಕ್ಷಕರು ಕೂತು ಚರ್ಚಿಸಿ ತೀರ್ಮಾನಿಸಿ ಸ್ವತ: ಇಬ್ಬರು ತಮ್ಮ ಸ್ವಂತ ಖರ್ಚಿನಲ್ಲಿ ಓಮಿನಿ ವ್ಯವಸ್ಥೆ ಮಾಡಲು ತೀರ್ಮಾನಿಸಲಾಯಿತು. ಈಗ ತಿಂಗಳಿಗೆ 2500/– ರೂಗಳಂತೆ ವರ್ಷಕ್ಕೆ 25000 ರೂಗಳನ್ನು ಇಬ್ಬರು ಭರಿಸುತ್ತಿದ್ದೇವೆ. ಈ ವ್ಯವಸ್ಥೆಯಿಂದ 2016–17ರಲ್ಲಿ ದಾಖಲಾತಿ 18 ಹಾಗೂ 2018–19 ರಲ್ಲಿ 20 ಮಕ್ಕಳು ದಾಖಲಾಗಿದ್ದಾರೆ.

### ❖ ಮಕ್ಕಳ ಪೋಷಕರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ:–

ನಮ್ಮ ಶಾಲೆಗೆ ದಾಖಲಾಗಿರುವ ಬಹುತೇಕ ಮಕ್ಕಳು ಪರಿಶಿಷ್ಟ ಜಾತಿಯ, ವಲಸೆ ವಾಸಿಗಳಾಗಿದ್ದು ಶೆಡ್‌ಗಳಲ್ಲಿ ವಾಸಿಸುತ್ತಾರೆ. ಇಲ್ಲಿ ಮಕ್ಕಳು ಒಂದು ಹೊತ್ತಿನ ಊಟಕ್ಕೂ ಪರದಾಡುವಂತಿದ್ದಾರೆ, ಮೊದಲು ಮಕ್ಕಳು ಶಾಲೆಗೆ ಬರುವುದು, ಹೊತ್ತಿನ ಊಟಕ್ಕಾಗಿ ಎನ್ನುವಂತಿತ್ತು. ಮಕ್ಕಳ ಜನನ ಪ್ರಮಾಣ ಪತ್ರವಾಗಲಿ, ಆದಾಯ ಜಾತಿ ಪ್ರಮಾಣ

ಪತ್ರವಾಗಲಿ, ರೇಷನ್ ಕಾರ್ಡ್, ಆಧಾರ್ ಕಾರ್ಡ್ ಹೀಗೆ ಯಾವುದೇ ದಾಖಲೆಗಳು ಅವರಲ್ಲಿ ಇರಲಿಲ್ಲ ಅಲ್ಲದೆ ಅದನ್ನು ಹೇಗೆ ಮಾಡಿಸಬೇಕೆಂಬ ಮಾಹಿತಿಯು ಅವರಿಗೆ ತಿಳಿದಿರಲಿಲ್ಲ. ಕಾರಣ ಆ ಪೋಷಕರು ಅನಕ್ಷರಸ್ಥರಾಗಿದ್ದಾರೆ. ಹೀಗಿರುವಾಗ ನಮ್ಮ ಶಾಲೆಯ ಮುಖ್ಯ ಶಿಕ್ಷಕರು ಅವರಿಗೆ ಎಲ್ಲಾ ದಾಖಲೆಗಳನ್ನು ಮಾಡಿಸಲು ಸೂಕ್ತ ಮಾರ್ಗದರ್ಶನ ನೀಡಿ ಶಾಲೆಯಿಂದ ನೆರವು ಮಾಡಿ ಕೊಟ್ಟಿದ್ದಾರೆ ಇದರ ಪರಿಣಾಮವಾಗಿ ಮಕ್ಕಳಿಗೆ ಹಾಗೂ ಪೋಷಕರಿಗೆ ಎಲ್ಲಾ ಪ್ರಮಾಣ ಪತ್ರಗಳು ದೊರೆತಿವೆ. ಈ ದಾಖಲೆಗಳ ಪ್ರತಿಫಲವಾಗಿ ಪೋಷಕರಿಗೆ ಗ್ರಾಮಪಂಚಾಯತಿ ವತಿಯಿಂದ ಮನೆಗಳು ಲಭ್ಯವಾಗಿ ಪೋಷಕರು, ಮಕ್ಕಳು ಈಗ ಸಂತಸ ಹಾಗೂ ನೆಮ್ಮದಿಯಿಂದ ಬದುಕುತಿದ್ದಾರೆ.

### ❖ ಶಾಲಾ ವ್ಯವಸ್ಥೆಯಲ್ಲಿನ ಬದಲಾವಣೆ:–

ಮಕ್ಕಳು ಶೆಡ್‌ಗಳಿಂದ ಬರುತ್ತಿದ್ದರಿಂದ ಅವರಿಗೆ ಅವರ ವೈಯಕ್ತಿಕ ಸ್ವಚ್ಚತೆಯ ಬಗ್ಗೆ ಅರಿವಿರಲಿಲ್ಲ. ನಾನು ಮೊದಲು ಶಾಲೆಗೆ ಹೋದಾಗ ಶಾಲಾ ವಾತಾವರಣ ಅಂದರೆ ಮಕ್ಕಳ ಸ್ವಚ್ಚತೆ ನೋಡಿ ದಂಗಾಗಿದ್ದೆ. ಏಕೆಂದರೆ ನನಗೆ ಮಕ್ಕಳ ಆರ್ಥಿಕ ಪರಿಸ್ಥಿತಿ ತಿಳಿದಿರಲಿಲ್ಲ, ಕೆಲ ದಿನದ ನಂತರ ನಮ್ಮ ಮುಖ್ಯ ಶಿಕ್ಷಕರು ಅವರು ವಾಸಿಸುವ ಸ್ಥಳಕ್ಕೆ ನನ್ನನ್ನೂ ಕರೆದುಕೊಂಡು ಹೋದರು, ಅವರ ಆ ಸ್ಥಿತಿ ನೋಡಿ ನನ್ನ ವೃತ್ತಿಗೆ ದ್ರೋಹ ಮಾಡುವನೆಂಬ ಅರಿವಾಯಿತು, ಮಕ್ಕಳಿಗಾಗಲಿ ಅವರ ಪೋಷಕರಿಗಾಗಲಿ ವೈಯಕ್ತಿಕ ಸ್ವಚ್ಚತೆ ಹಾಗೂ ಪರಿಸರ ಸ್ವಚ್ಚತೆಯ ಬಗ್ಗೆ ಅರಿವಿಲ್ಲದಂತೆ ಇದ್ದರು, ಮಕ್ಕಳ ಸ್ವಚ್ಚತೆ ಕಾಪಾಡುವ ದೃಷ್ಟಿಯಿಂದ ಹಾಗೂ ಪೋಷಕರಿಗೆ ಸ್ವಚ್ಚತೆಯ ಅರಿವು ಮೂಡಿಸಲು ಪ್ರತಿ ಮಗುವಿನ 3 ಜೊತೆ ಸಮವಸ್ತ್ರ, ಶೂ–ಸಾಕ್ಸ್, ಟೈ, ಬೆಲ್ಟ್ ಗಳನ್ನು ಶಾಲೆಯಲ್ಲಿಯೇ ಪ್ರತಿ ಮಗುವಿಗೊಂದು ಬಾಕ್ಸ್ ಮಾಡಿ ಅದರಲ್ಲಿ ಇರಿಸಿ ಪ್ರತಿದಿನ ಮಕ್ಕಳನ್ನು ಓಮಿನಿಯಲ್ಲಿ ಅವರನ್ನು ಕರೆತಂದು ಅವರಿಗೆ ಸೋಪಿನಿಂದ ಸ್ವಚ್ಚವಾಗಿ ಕೈ ಕಾಲು ಮುಖ ತೊಳೆದು ಕೊಳ್ಳಲು ಸೂಚಿಸಿ, ಎಣ್ಣೆ ಹಾಕಿ ತಲೆ ಬಾಚಿಸಿ ನಂತರವೇ ತರಗತಿ ಪಾಠಕ್ಕೆ ಅಣಿ ಮಾಡಿಕೊಳ್ಳುತ್ತಿದ್ದೆವು. ಅಲ್ಲದೇ ಆ ಬಟ್ಟೆಗಳನ್ನು 15 ದಿನಗಳಿಗೊಮ್ಮೆ ಅವರ ಮನೆಗೆ ಕಳುಹಿಸಿ ಶುಭ್ರಗೊಳಿಸಿಕೊಂಡು ತಂದು ಇಡಲು ಸೂಚಿಸಿದೆವು, ಪ್ರತಿ ಮಕ್ಕಳು ಹಾಗೆಯೇ ಮಾಡುತ್ತಿದ್ದರು, ಪ್ರತಿ ಎಸ್.ಡಿ.ಎಮ್.ಸಿ ಸಭೆ ಹಾಗೂ ಪೋಷಕರ ಸಭೆಯಲ್ಲಿ ಅವರ ವೈಯಕ್ತಿಕ ಸ್ವಚ್ಛತೆ ಹಾಗೂ ಪರಿಸರ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದೇ ಚರ್ಚೆಯ ಮೊದಲ ಅಂಶವಾಗಿತ್ತು, ಈಗ ಮಕ್ಕಳಲ್ಲಿ ಹಾಗೂ ಪೋಷಕರಲ್ಲಿ ಸ್ವಚ್ಚತೆಯ ಬಹುಪಾಲು ಅರಿವು ಬಂದಿದೆ,

ಶಾಲಾ ಸ್ವಚ್ಛತೆಗೂ ಅದೇ ರೀತಿಯ ಒತ್ತು ನೀಡಿದ್ದರಿಂದ ನಮ್ಮ ಶಾಲೆಗೆ 2017–18ನೇ ಸಾಲಿನಲ್ಲಿ "ಸ್ವಚ್ಛ ವಿದ್ಯಾಲಯ ಪುರಸ್ಕಾರ ದೊರೆತಿದೆ.

## ❖ ಶಾಲಾ ಶೈಕ್ಷಣಿಕ ಭೌತಿಕ ಸುಧಾರಣೆಗೆ ದಾನಿಗಳಿಂದ ಸಹಾಯ.

ನಮ್ಮ ಶಾಲೆಗೆ ಬರುವ ಬಹುತೇಕ ಮಕ್ಕಳು ಅಂದರೆ 20 ಮಕ್ಕಳಲ್ಲಿ 18 ಮಕ್ಕಳು ಕಡು ಬಡತನದವರಾದ್ದರಿಂದ ಅವರು ಶಾಲೆಗೆ ಬರುವುದೇ ಸವಾಲಾಗಿತ್ತು, ಯಾವುದೇ ಶೈಕ್ಷಣಿಕ ಕನಿಷ್ಟ ವಸ್ತುಗಳನ್ನು ಕರಿದಿಸಲು ಆರ್ಥಿಕ ಪರಿಸ್ಥಿತಿ ಇರಲಿಲ್ಲ, ಹಾಗಾಗಿ ಅವರು ಶಾಲೆಗೆ ಬಂದು ಕಲಿಯಲು ಹಿಂಜರಿಯುತ್ತಿದ್ದರು, ಇದರ ಪರಿಹಾರಕ್ಕಾಗಿಯೇ ಶಿಕ್ಷಕರು ಸ್ವತ: ಸ್ವಂತ ಖರ್ಚಿನಲ್ಲಿ ಓಮಿನಿ ವ್ಯವಸ್ಥೆ ಮಾಡಿದರು ಈ ಓಮಿನಿಯ ಖರ್ಚು ಕೂಡ 4 ಕಿ.ಮೀಗೆ 16 ಮಕ್ಕಳಿಗೆ ಸುಮಾರು 4 ರಿಂದ 5 ಸಾವಿರ ಆಗುವುದಾದರೂ ನಮ್ಮೊಂದಿಗೆ ಕೈ ಜೋಡಿಸಿ 2500/– ರೂ ಕೊಟ್ಟರೆ ಸಾಕು ಎಂದು ಶ್ರೀಯುತ ಹರ್ಷಾ ಕುಕ್ಕಳಲೆ ಇವರು ತಮ್ಮ ದಾರಾಳ ಗುಣವನ್ನು ತೋರಿಸುತ್ತಿದ್ದಾರೆ, ಅಲ್ಲದೇ ರೋಟರಿ ಕ್ಲಬ್‌ನಿಂದ ನಮ್ಮ ಮಕ್ಕಳಿಗೆ 2017–18ರಲ್ಲಿ ಪ್ರತಿ ಮಗುವಿಗು ಪೆನ್ಸಿಲ್, ಪೆನ್, ರಬ್ಬರ್, ಕ್ರಯಾನ್ಸ್ ಜಾಮಿಟ್ರಿ ನೀಡಿದ್ದು ಈ ವರ್ಷ ನೋಟು ಪುಸ್ತಕಗಳನ್ನು ನೀಡಿರುತ್ತಾರೆ, ರಾಜಸ್ಥಾನಿ ಮೂಲದವರಾದ ಶ್ರೀಯುತ ಸುರೇಶ್‌ರವರು ಪ್ರತಿ ಮಗುವಿಗೂ ಪ್ರತಿ ತಿಂಗಳು ಒಂದು ಪೆನ್ಸಿಲ್ ಒಂದು ರಬ್ಬರ್ ನೀಡುತ್ತಿದ್ದಾರೆ. ಶ್ರೀಮತಿ ಗೋಪಿಕಾ ಉಪನ್ಯಾಸಕಿ ಇವರು ಊಟದ ತಟ್ಟೆ ಲೋಟಗಳನ್ನು ನೀಡಿರುತ್ತಾರೆ. ಗ್ರಾಮಪಂಚಾಯಿತಿ ವತಿಯಿಂದ 2017–18 ರಲ್ಲಿ ಪ್ರತಿ ಮಗುವಿಗೂ 2 ಜೊತೆ ಬಟ್ಟೆ ನೀಡಿದ್ದರು ಈ ವರ್ಷ ಶಾಲಾ ಬ್ಯಾಗ್ ಗಳನ್ನು ಎಲ್ಲಾ ಮಕ್ಕಳಿಗೂ ನೀಡಿರುತ್ತಾರೆ.

## ❖ ಶಾಲಾ ಭೌತಿಕ ಪರಿಸರದ ಸೌಂದರ್ಯ

ನಮ್ಮ ಶಾಲೆಯಲ್ಲಿ ಮೊದಲು ಗ್ರಾಮ ಪಂಚಾಯಿತಿ ವತಿಯಿಂದ ನೀಡಿದ ಒಂದಿಷ್ಟು ಗಿಡಗಳು ಮಾತ್ರ ಇದ್ದವು, ನಾವು ಇಬ್ಬರು ಶಿಕ್ಷಕರು ಶಾಲಾ ಪರಿಸರವನ್ನು ಉತ್ತಮ ಪಡಿಸಬೇಕೆಂದು ಯೋಚಿಸಿದೆವು, ಆದರೆ ನೀರಿನ ಸಮಸ್ಯೆ ಹಾಗೂ ಕೆಲವು ಸ್ಥಳೀಯರ ಪುಂಡಾಟ ನಮ್ಮನ್ನು ಹೆಚ್ಚು ಕಾಡುತ್ತಿತ್ತು, ಆದರೂ ಶಾಲಾ ಸೌಂದರ್ಯ ಹೆಚ್ಚಿಸಲು ನಿರ್ಧರಿಸಿ ಶಾಲಾ ಮುಂಭಾಗದಲ್ಲಿ ಸುಮಾರು 50 ಅಡಿಕೆ ಗಿಡಗಳನ್ನು ಹಾಗೂ ಬದನೆಕಾಯಿ, ತೊಂಡೆಕಾಯಿ, ಚೀನಿಕಾಯಿ, ಕುಂಬಳಕಾಯಿ, ಸೀಮೆಬದನೆಕಾಯಿ, ಹೀರೆಕಾಯಿ, ಬೀನ್ಸ್, ಟೋಮೋಟೋ, ನುಗ್ಗೆಕಾಯಿ, ಬಸಳೆ ಸೊಪ್ಪು ಇತ್ಯಾದಿ ತರಕಾರಿ ಗಿಡಗಳನ್ನು ಬೆಳೆದಿದ್ದೇವೆ. ಅಲ್ಲದೆ ಹಲವು ಅಲಂಕಾರಿಕ ಗಿಡಗಳು, ದಾಸಾವಾಳ, ಗುಲಾಬಿ, ಚೆಂಡು ಹೂವುಗಳಂತಹ ಹೂವಿನ ಗಿಡಗಳು, ನಿಂಬೆ, ತುಂಬೆ, ತುಳಸಿ, ಪುದೀನ, ಒಂದೆಲಗ, ಶುಗರ್, ಅಮೃತ ಬಳ್ಳಿ ಸಾಂಬಾರ ಎಲೆ, ವಿಳ್ಯೆದೆಲೆ, ಕಾಳುಮೆಣಸಿನ ಬಳ್ಳಿ, ನಂಜಿನ ಎಲೆ, ಪಲಾವ್ ಗಿಡ, ಬಜೆ, ಹೀಗೆ ಸುಮಾರಿ 30 ಕ್ಕೂ ಹೆಚ್ಚಿನ ಔಷಧಿ ಗಿಡಗಳನ್ನು

ಬೆಳೆಸಿದ್ದೇವೆ, ಪಪ್ಪಾಯಿ, ಸೀಬೆಯಂತಹ ಹಣ್ಣಿನ ಗಿಡಗಳಿದ್ದು ಶಾಲಾ ಮೈದಾನ ಮಳೆಗಾಲದಲ್ಲಿ ಹಸಿರಿನಿಂದ ಕಂಗೊಳಿಸುತ್ತದೆ, ಬೇಸಿಗೆಯಲ್ಲಿ ನೀರಿನ ಬರಗಾಲದ ಪರಿಹಾರಕ್ಕಾಗಿ ಪ್ರತಿ ಅಡಿಕೆ ಗಿಡಗಳಿಗೆ ಹನಿ ನೀರಾವರಿಯಾಗಿ ಉಪಯೋಗಿಸಿದ 2 ಲೀಟರ್ ಬಾಟಲಿಗಳಿಗೆ ನೀರು ತುಂಬಿ ಒಂದು ಹೋಲ್ ಮಾಡಿ ನಿಧಾನವಾಗಿ ಗಿಡದ ಬುಡಕ್ಕೆ ನೀರು ಹೋಗುವಂತೆ ವ್ಯವಸ್ಥೆ ಮಾಡಿದ್ದೇವೆ, ಹೂವಿನ ಗಿಡ ಹಾಗೂ ಔಷಧಿಯ ಗಿಡಗಳಿಗೆ ಗ್ರಾಮ ಪಂಚಾಯತಿ ವತಿಯಿಂದ ಬೀದಿನಲ್ಲಿಯ ವ್ಯವಸ್ಥೆಯಿಂದ ಸಿಂಪಡಿಸುತ್ತೇವೆ.

### ❖ ಶಾಲಾ ಶೈಕ್ಷಣಿಕ ಪ್ರಗತಿ:

ನಮ್ಮ ಶಾಲೆಗೆ ಬರುವ ಬಹುತೇಕ ಮಕ್ಕಳು ವಲಸೆ ಮಕ್ಕಳಾಗಿರುವುದರಿಂದ ಅವರ ಮಾತೃ ಭಾಷೆಯು ವಿಭಿನ್ನ ಮಿಶ್ರಿತ ಭಾಷೆಯಾಗಿದೆ, ಕನ್ನಡ ಭಾಷೆ ಕಲಿಯುವುದು ಶಾಲೆಯಲ್ಲಿ ಮಾತ್ರ, ಮನೆಯಲ್ಲಿ ಅವರು ಬೇರೆ ಭಾಷೆ ಮಾತನಾಡುವುದರಿಂದ ಹಾಗೂ ಪೋಷಕರು ಅನಕ್ಷರಸ್ಥರಾಗಿರುವುದರಿಂದ ಮಕ್ಕಳ ಭಾಷಾ ಕಲಿಕೆ ಕಷ್ಟವಾಗಿತ್ತು, ನಮಗೆ ಭಾಷೆ ಕಲಿಸುವುದು ಇನ್ನೊಂದು ಸವಾಲಾಗಿತ್ತು. ಅದಕ್ಕಾಗಿ ಮಕ್ಕಳಿಗೆ ಶಾಲೆಯಲ್ಲಿ ಕಡ್ಡಾಯ ಕನ್ನಡ ಮಾತನಾಡುವುದು ಹಾಗೂ ಮನೆಯಲ್ಲಿಯೂ ಪೋಷಕರು ಕನ್ನಡವನ್ನೆ ಹೆಚ್ಚಾಗಿ ಬಳಸಲು ಸೂಚಿಸಿದ್ದೇವೆ, ಇದರಿಂದ ಮಕ್ಕಳು ಕನ್ನಡ ಭಾಷೆ ಅರ್ಥಮಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ಅವರ ಕಲಿಕಾ ಫಲಗಳನ್ನು ತಲುಪಲು ಪ್ರಯತ್ನದಲ್ಲಿದ್ದಾರೆ.












































